Test Paper : III

Test Subject : **KANNADA**

Test Subject Code : **K-0216**

Test Booklet Serial No. : ____________________

OMR Sheet No. : ____________________

Roll No. | | | | | | | | |

(Figures as per admission card)

**Name & Signature of Invigilator/s**

Signature : ____________________

Name : ____________________

**Paper : III**

**Subject : KANNADA**

Time : 2 Hours 30 Minutes

Maximum Marks : 150

Number of Pages in this Booklet : **16**

Number of Questions in this Booklet : **75**

### ಅಭ್ಯರ್ಥಿಗಳಿಗೆ ಸೂಚನೆಗಳು

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ :** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

### Instructions for the Candidates

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the circles in OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಕನ್ನಡ

## ಪೇಪರ್ – III

**ಸೂಚನೆ :** ಈ ಪತ್ರಿಕೆಯು **(75) ಎಪ್ಪತ್ತೈದು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳೂ **ಕಡ್ಡಾಯ.**

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು.**

**1.** ವಸುಭಾಗ ಭಟ್ಟನ ಕೃತಿಯನ್ನು ಕನ್ನಡದಲ್ಲಿ ಪೊಸತಾಗಿ ವಿರಚಿಸುವೆಂ – ಎಂದ ಕವಿ

(A) ನಯಸೇನ

(B) ನಾಗವರ್ಮ

(C) ಚಂದ್ರರಾಜ

(D) ದುರ್ಗಸಿಂಹ

**2.** 'ಆರಂಕುಶಮಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ'–ಈ ಮಾತನ್ನು ಪಂಪ ಯಾರ ಮೂಲಕ ಹೇಳಿಸಿದ್ದಾನೆ ?

(A) ಕರ್ಣ

(B) ಧರ್ಮರಾಯ

(C) ದುರ್ಯೋಧನ

(D) ಅರ್ಜುನ

**3.** 'ಸಿಕ್ಕಿದಡೆ ಕೃಷ್ಣದರ್ಶನದ ಪುಣ್ಯಮೆ ಸಾಕು'– ಈ ಸಾಲುಗಳಿರುವ ಕಾವ್ಯ.

(A) ಕುಮಾರವ್ಯಾಸ

(B) ಲಕ್ಷ್ಮೀಶ

(C) ಕನಕದಾಸ

(D) ಪುರಂದರದಾಸ

**4.** ದೇಕಬ್ಬೆಯ ಶಾಸನವೊಂದು

(A) ದಾನ ಶಾಸನ

(B) ನಿಷಿದಿ ಶಾಸನ

(C) ಮಾಸ್ತಿಕಲ್ಲು

(D) ವೀರಕಲ್ಲು

**5.** 'ಪರಮಾರ್ಥ' ಎಂಬ ಅಂಕಿತವುಳ್ಳ ಸರ್ವಜ್ಞನ ವಚನಗಳನ್ನುಸಂಪಾದಿಸಿದವರು

(A) ಉತ್ತಂಗಿ ಚೆನ್ನಬಸಪ್ಪ

(B) ರಾಗೌ

(C) ಎಲ್. ಬಸವರಾಜು

(D) ಹೆಚ್. ತಿಪ್ಪೇರುದ್ರಸ್ವಾಮಿ

**6.** 'ಪದ್ಯಂ ವದ್ಯಂ ಗದ್ಯಂ ಹೃದ್ಯಂ'– ಈ ಸಾಲುಗಳಿರುವ ಕೃತಿ

(A) ಅದ್ಭುತ ರಾಮಾಯಣ

(B) ರಾಮಪಟ್ಟಾಭಿಷೇಕ

(C) ರಾಮಾಶ್ವಮೇಧ

(D) ರತ್ನಾವತೀಕಲ್ಯಾಣ

7. 'ಹೊಲೆಯನು ಯಾರು?' ಈ ಕವನವು ಪ್ರಕಟವಾದ ಪತ್ರಿಕೆ

(A) ಸ್ವದೇಶಾಭಿಮಾನಿ

(B) ಸುಬೋಧಿನಿ

(C) ಸುವಾಸಿನಿ

(D) ವಾಗ್ಭೂಷಣ

8. ''ಏನಾನುಮಂ ಮಾಡು ಕೈಗೆದೊರೆತುಜ್ಜುಗವ ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ''–ಈ ಸಾಲು ಈ ಕವಿಯವು

(A) ಗೋವಿಂದ ಪೈ

(B) ಕುವೆಂಪು

(C) ಡಿ.ವಿ.ಜಿ.

(D) ಎಸ್.ಜಿ. ನರಸಿಂಹಾಚಾರ್ಯ

9. ''ಇಲ್ಲಿ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ, ಯಾರೂ ಯಕಃಶ್ಚಿತ್ತರಲ್ಲ'' ಎನ್ನುವ ಪ್ರಸಿದ್ಧ ಸಾಲುಗಳುಳ್ಳ ಕಾದಂಬರಿ

(A) ಕಾನೂರು ಸುಬ್ಬಮ್ಮ ಹೆಗ್ಗಡತಿ

(B) ಮಲೆಗಳಲ್ಲಿ ಮದುಮಗಳು

(C) ಚೋಮನದುಡಿ

(D) ಮರಳಿ ಮಣ್ಣಿಗೆ

10. ''ಸುಖ ತಾನು ಬರುವಾಗ ಗುಳೆ ಎದ್ದು ಬರುವುದು, ಒಂದಲ್ಲ ಎರಡಲ್ಲ; ಪರಿವಾರವೇ''– ಈ ಸಾಲುಗಳಿರುವ ಕವನ

(A) ಸಖೀಗೀತ

(B) ನಾನು ಬಡವಿ

(C) –ಗೆ

(D) ಮೊದಲಗಿತ್ತಿ

11. ಕನ್ನಡದಲ್ಲಿ ನವ್ಯದ ಆಗಮನವನ್ನು ಘೋಷಿಸಿದ ಕವನ

(A) ಸಮುದ್ರಗೀತೆಗಳು

(B) ಭೂಮಿಗೀತ

(C) ಏಳುಸುತ್ತಿನ ಕೋಟೆ

(D) ದ್ಯಾವಾಪೃಥ್ವಿ

12. ಜಿ.ಪಿ. ರಾಜರತ್ನಂ ಅವರ 'ಪುರುಷ ಸರಸ್ವತಿ' – ಇದು

(A) ಅನುಭಾವ ಕಾವ್ಯ

(B) ವಿಡಂಬನ ಕಾವ್ಯ

(C) ಪ್ರೇಮ ಕಾವ್ಯ

(D) ಭಕ್ತಿ ಕಾವ್ಯ

13. 'ನಾಗರ ಹಾವು' – ಕವನದ ಕವಿ ಯಾರು ?

(A) ಗೋವಿಂದ ಪೈ

(B) ಪಂಜೆ ಮಂಗೇಶರಾಯ

(C) ಕುವೆಂಪು

(D) ಜಿಎಸ್‌ಎಸ್

14. ಯಾವ ಕಾದಂಬರಿಯಲ್ಲಿ ಸಂಕಪ್ಪಯ್ಯನ ಪಾತ್ರವಿದೆ ?

(A) ಮರಳಿ ಮಣ್ಣಿಗೆ

(B) ಕುಡಿಯರ ಕೂಸು

(C) ಮೈಮನಗಳ ಸುಳಿಯಲ್ಲಿ

(D) ಚೋಮನದುಡಿ

15. 'ಸಾಹಿತ್ಯ ಮತ್ತು ಕಾಮ ಪ್ರಚೋದನೆ' – ಇದು ಯಾರ ಕೃತಿ ?

(A) ಅನಕೃ

(B) ತರಾಸು

(C) ಬಸವರಾಜ ಕಟ್ಟೀಮನಿ

(D) ನಿರಂಜನ

16. 'ಮನುವಿನ ರಾಣಿ' ಯಾರ ಕಥೆ ?

(A) ತಿರುಮಲೆ ರಾಜಮ್ಮ

(B) ತ್ರಿವೇಣಿ

(C) ಟಿ. ಸುನಂದಮ್ಮ

(D) ಕೊಡಗಿನ ಗೌರಮ್ಮ

17. ಪುರಾಣಭಂಜನೆ ಸಿದ್ಧಾಂತವನ್ನು ಅಳವಡಿಸಿಕೊಂಡು ಬಂದ ಭೈರಪ್ಪನವರ ಕಾದಂಬರಿ

(A) ದಾಟು

(B) ಗೃಹಭಂಗ

(C) ಪರ್ವ

(D) ಸಾರ್ಥ

18. ಇದು ಸಂಸ ಅವರ ನಾಟಕ

(A) ಬಿರುದಂತೆಂಬರ ಗಂಡ

(B) ಉಷಾಹರಣ

(C) ಯಶೋಧರಾ

(D) ವಿರಾಟ ಪುರುಷ

**19.** 'ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ'–ಈ ಸಂಶೋಧನಾ ಮಹಾಪ್ರಬಂಧವನ್ನು ರಚಿಸಿದವರು

(A) ಎಂ.ಎಂ. ಕಲಬುರ್ಗಿ

(B) ಎಂ. ಚಿದಾನಂದ ಮೂರ್ತಿ

(C) ಹಂಪ ನಾಗರಾಜಯ್ಯ

(D) ಟಿ.ವಿ. ವೆಂಕಟಾಚಲಶಾಸ್ತ್ರಿ

**20.** ಶರಣರ ವಚನಗಳನ್ನು 'ಸ್ಪೀಕಿಂಗ್ ಆಫ್ ಶಿವ' ಎಂಬುದಾಗಿ ಅನುವಾದಿಸಿದವರು

(A) ಎಲ್. ಎಸ್. ಶೇಷಗಿರಿರಾವ್

(B) ಎ.ಕೆ. ರಾಮಾನುಜನ್

(C) ಡಿ.ಆರ್. ನಾಗರಾಜ್

(D) ಹಾ. ಮಾ. ನಾಯಕ

**21.** 'ಛಂದೋಗತಿ' –ಇದನ್ನು ಬರೆದವರು

(A) ಡಿ.ಎಸ್. ಕರ್ಕಿ

(B) ಟಿ.ವಿ. ವೆಂಕಟಾಚಲಶಾಸ್ತ್ರಿ

(C) ಸೇಡಿಯಾಪು ಕೃಷ್ಣಭಟ್ಟ

(D) ಎಲ್. ಬಸವರಾಜು

**22.** 'ಪ್ರತಿಭೆ' ಯನ್ನು ಪ್ರತಿಪಾದಿಸಿದ ಪಾಶ್ಚಾತ್ಯ ಮೀಮಾಂಸಕಾರ

(A) ವರ್ಡ್ಸ್‌ವರ್ಥ್

(B) ಕೋಲ್‌ರಿಜ್

(C) ಕ್ರೋಚೆ

(D) ಸಿಸಿಲ್ ಡೇ ಲೂಯಿ

**23.** 'ಕಾವ್ಯಶೋಭಾಕಾರನ್ ಧರ್ಮಾನ್ ಅಲಂಕಾರಾನ್ ಪ್ರಚಕ್ಷತೆ' – ಈ ವಾಖ್ಯೆ ಇರುವ ಕೃತಿ.

(A) ಕಾವ್ಯಾದರ್ಶ

(B) ಕಾವ್ಯಾವಲೋಕನ

(C) ಕಾವ್ಯಾಲಂಕಾರ

(D) ಕಾವ್ಯಾನುಶೀಲನ

**24.** ಶಬ್ದದ ವಾಚ್ಯಾರ್ಥವು ಸನ್ನಿವೇಶಕ್ಕೆ ಹೊಂದದಿದ್ದಲ್ಲಿ ಹೊಂದಿಕೆಯಾಗುವಂತೆ ಅರ್ಥ ಕೊಡುವ ವೃತ್ತಿ

(A) ಅಭಿಧಾ ವೃತ್ತಿ

(B) ಲಕ್ಷಣಾ ವೃತ್ತಿ

(C) ವ್ಯಂಜನಾ ವೃತ್ತಿ

(D) ತಾತ್ಪರ್ಯ ವೃತ್ತಿ

**25.** ಚಾರಿತ್ರಿಕ ವಿಮರ್ಶಾವಿಧಾನವನ್ನು ಮೊಟ್ಟ ಮೊದಲು ರೂಢಿಗೆ ತಂದವನು

(A) ಕಾರ್ಲೈಲ್

(B) ಹೆಲೆನ್ ಗಾರ್ಡನ್

(C) ಎಫ್. ಎಲ್. ಲುಕಾಸ್

(D) ಹರ್ಬರ್ಟ್ ರೀಡ್

**26.** 'ಇಂಟರ್‌ಪ್ರಿಟೇಷನ್ ಆಫ್ ಡ್ರೀಮ್ಸ್' – ಈ ಕೃತಿಯ ಕರ್ತೃ

(A) ಸಿ.ಜೆ. ಯೂಂಗ್

(B) ಸಿಗ್ಮಂಡ್ ಫ್ರಾಯ್ಡ್

(C) ಆಡ್ಲರ್

(D) ಇರ್ವಿಂಗ್ ವೆಲ್ಲೆಸ್ಲಿ

**27.** 'ಕರುನಾಡರ್' ಎಂಬ ಪದ ಪ್ರಯೋಗವಾಗಿರುವ ಕೃತಿ

(A) ವೀರಶೋಳಿಯಂ

(B) ಜ್ಞಾನೇಶ್ವರಿ

(C) ಶಿಲಪ್ಪದಿಗಾರಂ

(D) ಮೃಚ್ಛಕಟಿಕ

**28.** ''ಹೊಸಗನ್ನಡ ನುಡಿಗನ್ನಡಿ ಎಂಬ ಹೊಸಗನ್ನಡ ವ್ಯಾಕರಣವು'' – ಯಾರ ಕೃತಿ ?

(A) ಎಸ್. ಕೃಷ್ಣಯಾಚಾರ್ಯ

(B) ತೀ. ನಂ. ಶ್ರೀಕಂಠಯ್ಯ

(C) ಎಲ್. ವಿ. ರಾಮಸ್ವಾಮಿ ಅಯ್ಯರ್

(D) ಹೆಚ್. ಎಸ್. ಬಿಳಿಗಿರಿ

**29.** ಇದು ಲಿಂಗವ್ಯವಸ್ಥೆ ಇಲ್ಲದ ಭಾಷೆ

(A) ಕುಯಿ

(B) ಬ್ರಾಹುಈ

(C) ಮಾಲ್ತೊ

(D) ಕೋತ

**30.** ಎ ಕೋರ್ಸ್ ಇನ್ ಮಾಡರ್ನ್ ಲಿಂಗ್ವಿಸ್ಟಿಕ್ಸ್ – ಯಾರ ಕೃತಿ ?

(A) ಸಿ.ಎಫ್. ಹಾಕೆಟ್

(B) ರಾಬರ್ಟ್ ಹಾಲ್

(C) ಫರ್ಡಿನಾಂಡ್ ಡಿ. ಸಸೂರ್

(D) ಬ್ಲೂಮ್ ಫೀಲ್ಡ್

**31.** ಪಡಿ, ಠಾಣ, ಕಜ್ಜ, ನೇಹ – ಇವು ಈ ಭಾಷೆಯ ಶಬ್ದಗಳು

(A) ಕನ್ನಡ

(B) ಸಂಸ್ಕೃತ

(C) ಪ್ರಾಕೃತ

(D) ಮರಾಠಿ

**32.** 'ಅರಗಿಳಿ' – ಇದು ಈ ಸಮಾಸ

(A) ಅರಿ ಸಮಾಸ

(B) ಕ್ರಿಯಾ ಸಮಾಸ

(C) ತತ್ಪುರುಷ ಸಮಾಸ

(D) ಕರ್ಮಧಾರಯ ಸಮಾಸ

**33.** ಇದು ಅರ್ಥವ್ಯತ್ಯಾಸಕ್ಕೆ ಉದಾಹರಣೆ

(A) ಅಮ್ಮ

(B) ಶೃಂಗಾರ

(C) ಬಸದಿ

(D) ಜೋಯಿಸ

**34.** ಗುರುಲಘು ಮೊದಲಲ್ಲಿ ಬರಲು

(A) ಮ–ನ–ಗಣ

(B) ಸ–ತ–ಗಣ

(C) ಜ–ರ–ಗಣ

(D) ಭ–ಯ–ಗಣ

**35.** ಗಿರಿಗಳ್ ಪರಮಾಣಗಳೆನೆ।ಸರೋಜಭವನೀ ಕರೀನ್ದ್ರಮಂ ಮಾಡಿದನೆಂ॥ – ಇದು ಈ ಪ್ರಾಸಕ್ಕೆ ಉದಾಹರಣೆ.

(A) ಸಿಂಹ ಪ್ರಾಸ

(B) ಗಜ ಪ್ರಾಸ

(C) ವೃಷಭ ಪ್ರಾಸ

(D) ಅಜ ಪ್ರಾಸ

**36.** ಆದಿಯಲ್ಲಿ ನಾಲ್ಕು ಗುರುಗಳು ಇರುವ ವೃತ್ತ

(A) ಮತ್ತೇಭ

(B) ಮಹಾಸ್ರಗ್ಧರೆ

(C) ಸ್ರಗ್ಧರೆ

(D) ಶಾರ್ದೂಲ

**37.** ಚಿಮ್ಮಿತ ನಿರಿಯನು ಬನದಲಿ ಬಂದಳು ಬಿಂಕದ ಸಿಂಗಾರಿ – ಇದು ಇದಕ್ಕೆ ಉದಾಹರಣೆ

(A) ಪದ್ಮಗಣ

(B) ಮುಡಿ

(C) ಅನಾಗತ

(D) ಗಣಪರಿವೃತ್ತಿ

**38.** 'ನೀರು ಲೋಹದ ಚಿಂತೆ'– ಇದು ಇವರ ಕವನ ಸಂಕಲನ

(A) ಸುಕನ್ಯಾ ಮಾರುತಿ

(B) ಮಾಲತಿ ಪಟ್ಟಣಶೆಟ್ಟಿ

(C) ವಿಜಯಾ ದಬ್ಬೆ

(D) ಹೆಚ್. ಎಸ್. ಮುಕ್ತಾಯಕ್ಕ

**39.** 'ದಿ ಸೆಕೆಂಡ್ ಸ್ಟೇಜ್' – ಇದು ಇವರ ಕೃತಿ

(A) ಸಿಮನ್ ದ ಬೋವಾ

(B) ಮೇರಿ ಉಲ್‌ಸ್ಟನ್ ಕ್ರಾಫ್ಟ್

(C) ಬೆಟ್ಟಿ ಫ್ರೀಡನ್

(D) ವರ್ಜೀನಿಯ ವುಲ್ಫ್

**40.** 'ಫೋಕ್ ಸಾಂಗ್ಸ್ ಆಫ್ ಸದರನ್ ಇಂಡಿಯಾ' ಎನ್ನುವ ಗ್ರಂಥದಲ್ಲಿ ಕನ್ನಡದ ಜಾನಪದ ಗೀತೆಗಳನ್ನು ಅನುವಾದಿಸಿದವರು

(A) ಜೆ. ಎಫ್. ಫ್ಲೀಟ್

(B) ಚಾರ್ಲ್ಸ್ ಗೋವರ್

(C) ಕಿಟೆಲ್

(D) ಇ. ಪಿ. ರೈಸ್

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

**41.** ಶ್ರೀವಿಜಯ ಇವರನ್ನು ಗದ್ಯಕವಿಗಳೆಂದು ಕರೆದಿದ್ದಾನೆ.

I. ಪಂಡಿತ ಮತ್ತು ಚಂದ್ರ

II. ವಿಮಲೋದಯ ಮತ್ತು ಜಯಬಂಧು

III. ಕವೀಶ್ವರ ಮತ್ತು ನಾಗಾರ್ಜುನ

IV. ಶ್ರೀವಿಜಯ ಮತ್ತು ಲೋಕಪಾಲ

(A) I ಮತ್ತು II (B) I ಮತ್ತು III

(C) II ಮತ್ತು III (D) I ಮತ್ತು IV

**42.** ಇವು ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಕೃತಿಗಳು.

I. ಕುಮಾರವ್ಯಾಸ ಭಾರತ ಮತ್ತು ತೊರೆವೆ ರಾಮಾಯಣ

II. ಹರಿಶ್ಚಂದ್ರ ಕಾವ್ಯ ಮತ್ತು ಸಿದ್ಧರಾಮ ಚಾರಿತ್ರ್ಯ

III. ಜೈಮಿನಿ ಭಾರತ ಮತ್ತು ಶಿವತತ್ವ ಚಿಂತಾಮಣಿ

IV. ಪ್ರಭುಲಿಂಗಲೀಲೆ ಮತ್ತು ಸನತ್ಕುಮಾರ ಚರಿತೆ

(A) I ಮತ್ತು II (B) II ಮತ್ತು III

(C) III ಮತ್ತು IV (D) I ಮತ್ತು IV

**43.** ಇವರಿಬ್ಬರು ಕೀರ್ತನಕಾರರು ಮತ್ತು ಕವಿಗಳು.

I. ಪುರಂದರದಾಸ

II. ಕನಕದಾಸ

III. ಜಗನ್ನಾಥದಾಸ

IV. ಶ್ರೀಪಾದರಾಯ

(A) I ಮತ್ತು II

(B) I ಮತ್ತು III

(C) II ಮತ್ತು III

(D) III ಮತ್ತು IV

**44.** ಇವು ನವೋದಯ ಕವಿತೆಗಳು.

I. ಸಗ್ಗದ ಬಾಗಿಲು

II. ಬೆಳಗು

III. ಗಡಿಯಾರದಂಗಡಿಯ ಮುಂದೆ

IV. ನೆಹರೂ ನಿವೃತ್ತರಾಗುದಿಲ್ಲ

(A) I ಮತ್ತು II

(B) I ಮತ್ತು III

(C) II ಮತ್ತು III

(D) II ಮತ್ತು IV

**45.** ಇವು ಪ್ರಗಾಥಗಳು.

I. ಕಿಂದರಜೋಗಿ

II. ಶ್ರೀ ಗೊಮ್ಮಟ ಜಿನಸ್ತುತಿ

III. ಓ ಹಾಡೇ

IV. ಮಾದ್ರಿಯ ಚಿತೆ

(A) I ಮತ್ತು II

(B) I ಮತ್ತು III

(C) II ಮತ್ತು III

(D) III ಮತ್ತು IV

**46.** ಈ ಪಾತ್ರಗಳು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿವೆ.

I. ಹೂವಯ್ಯ

II. ಮುಕುಂದಯ್ಯ

III. ಸೀತೆ

IV. ಚಿನ್ನಮ್ಮ

(A) I ಮತ್ತು II

(B) I ಮತ್ತು III

(C) II ಮತ್ತು III

(D) II ಮತ್ತು IV

**47.** ಇವು ಅನಂತಮೂರ್ತಿಯವರ ಕಥೆಗಳು

I. ಕ್ಲಿಪ್ ಜಾಯಿಂಟ್

II. ಕ್ಷಿತಿಜ

III. ಕಥೆಯಾದಳು ಹುಡುಗಿ

IV. ನವಿಲುಗಳು

(A) I ಮತ್ತು II

(B) II ಮತ್ತು IV

(C) I ಮತ್ತು III

(D) I ಮತ್ತು IV

**48.** ಮಹಾಶಿವರಾತ್ರಿ ಮತ್ತು ಮಹಾಚೈತ್ರ ನಾಟಕಗಳ ಕರ್ತೃಗಳು.

I. ಗಿರೀಶ್ ಕಾರ್ನಾಡ್

II. ಚಂದ್ರಶೇಖರ ಕಂಬಾರ

III. ಹೆಚ್. ಎಸ್. ಶಿವಪ್ರಕಾಶ

IV. ಪಿ. ಲಂಕೇಶ್

(A) I ಮತ್ತು II

(B) II ಮತ್ತು IV

(C) II ಮತ್ತು III

(D) I ಮತ್ತು IV

**49.** 'ವಡ್ಡಾರಾಧನೆ'ಯ ಬಗ್ಗೆ ಸಂಶೋಧನೆ ಮಾಡಿದ ವಿದ್ವಾಂಸರು.

I. ಎಂ. ಬಿ. ನೇಗಿನಹಾಳ

II. ಬಿ. ಕೆ. ಖಡಬಡಿ

III. ಕೆ. ವಿ. ನಾರಾಯಣ

IV. ಹಂಪ ನಾಗರಾಜಯ್ಯ

(A) I ಮತ್ತು II

(B) I ಮತ್ತು III

(C) II ಮತ್ತು III

(D) II ಮತ್ತು IV

**50.** ಪ್ರತಿಭೆಯ ಕುರಿತು ಚರ್ಚಿಸಿದ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು.

I. ಭಟ್ಟತೌತ

II. ಕೊಲ್‌ರಿಜ್

III. ಭಟ್ಟಲೊಲ್ಲಟ

IV. ಎಜ್ರಾಪೌಂಡ್

(A) I ಮತ್ತು II

(B) II ಮತ್ತು IV

(C) III ಮತ್ತು IV

(D) II ಮತ್ತು III

**51.** ಭರತನ 'ನಾಟ್ಯಶಾಸ್ತ್ರ'ಕ್ಕೆ ವ್ಯಾಖ್ಯಾನವನ್ನು ಬರೆದವರು

I. ಉದ್ಭಟ

II. ಭಟ್ಟತೌತ

III. ಅಭಿನವಗುಪ್ತ

IV. ಆನಂದವರ್ಧನ

(A) I ಮತ್ತು II

(B) II ಮತ್ತು IV

(C) I ಮತ್ತು III

(D) III ಮತ್ತು IV

**52.** ಇವರು ಸಾಂಸ್ಕೃತಿಕ ಸ್ತ್ರೀವಾದದ ಪ್ರತಿಪಾದಕರು.

I. ಹೆಲೆನ್ ಸೀಕ್ಸ್

II. ಝೂರಿಯಾ ಕ್ರಿಸ್ತೇವಾ

III. ಮೇರಿಡಾಲಿ

IV. ರಾಬಿನ್ ಮೊರ್ಗಾನ್

(A) I ಮತ್ತು II

(B) II ಮತ್ತು IV

(C) I ಮತ್ತು III

(D) III ಮತ್ತು IV

**53.** ಇವು ಪೂರ್ವದ ಹಳಗನ್ನಡ ವಿಭಕ್ತಿ ಪ್ರತ್ಯಯಗಳು.

I. ಮ್ ಮತ್ತು ಆನ್

II. ಇನ್ ಮತ್ತು ಉಳ್

III. ಇಮ್ ಮತ್ತು ನ್

IV. ಒಳ್ ಮತ್ತು ಆಮ್

(A) I ಮತ್ತು II

(B) II ಮತ್ತು IV

(C) II ಮತ್ತು III

(D) III ಮತ್ತು IV

**54.** ಇದರಲ್ಲಿ ಯಾವುದು ಸರಿಯಾದ ಹೊಂದಾಣಿಕೆ ಅಲ್ಲ ?

I. ದ್ವಿಗು ಸಮಾಸ – ಒಕ್ಕಣ್ಣು

II. ಅರಿ ಸಮಾಸ – ಕಣ್ದೆರೆದವನು

III. ಕ್ರಿಯಾ ಸಮಾಸ – ಅಂಗೈ

IV. ದ್ವಂದ್ವ ಸಮಾಸ – ಆಟ ಪಾಟ ಕೂಟಂಗಳ್

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) I ಮತ್ತು III

(C) II ಮತ್ತು III

(D) III ಮತ್ತು IV

**55.** ಇವುಗಳಲ್ಲಿ ಯಾವುದು ಸರಿಯಾದ ಹೊಂದಾಣಿಕೆ.

I. ಕಾಲ್ಡ್‌ವೆಲ್–ಕೊಲಾಮಿ ಒಂದು ದ್ರಾವಿಡ ಭಾಷೆ

II. ಎಂ. ಬಿ.ಎಮಿನೊ – ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣ

III. ಹೆಚ್. ಎಸ್. ಬಿಳಿಗಿರಿ – ವರಸೆಗಳು

IV. ಕೆ. ಕೆಂಪೇಗೌಡ – ಭಾಷೆ ಮತ್ತು ಭಾಷಾ ವಿಜ್ಞಾನ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) I ಮತ್ತು III

(C) II ಮತ್ತು III

(D) III ಮತ್ತು IV

**56.** ಇವು ಮಾತ್ರಗಣ ಛಂದಸ್ಸುಗಳು.

I. ಅಕ್ಕರಿಕೆ

II. ಉತ್ಪಲ

III. ಪಿರಿಯಕ್ಕರ

IV. ಚಂಪಕ

ಇವುಗಳಲ್ಲಿ ಸರಿಯಾದ ಉತ್ತರ :

(A) I ಮತ್ತು II

(B) II ಮತ್ತು IV

(C) I ಮತ್ತು III

(D) III ಮತ್ತು IV

**ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ.**

**57.** **ಹೇಳಿಕೆ :** ''ಪಗೆಯನೇಂಗಳ ಪಟ್ಟಮೆ ಪಾರಿ ತಿಂಬುದೇ''.
**ವಿವರಣೆ :** ಕಟ್ಟಿದ ಪಟ್ಟವು ವೈರಿಗಳನ್ನು ಅಟ್ಟಾಡಿಸಿ ಕೊಲ್ಲುವುದೇ ?

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**58.** **ಹೇಳಿಕೆ :** ''ಬರುಶಠಗನ ಭಕ್ತಿ ದಿಟವೆಂದು ನಂಬಬೇಡ। ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟ ನೆಗೆದಂತಾಯ್ತು''.
**ವಿವರಣೆ :** ಬರುತ್ತಿರುವ ಹಠಮಾರಿ ಭಕ್ತನ ಭಕ್ತಿ ದಿಟವೆಂದು ನಂಬಬೇಡ। ಅವರನ್ನು ನಂಬುವದೆಂದರೆ ಬೆಕ್ಕು ಇಲಿಯನ್ನು ಕಂಡು ಪುಟನೆಗೆದಂತೆಯೇ ಸರಿ।

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**59.** **ಹೇಳಿಕೆ :** ''ಅರೆವನಯ್ಯಾ ಸಣ್ಣವಹನ್ನಕ್ಕ''
**ವಿವರಣೆ :** ಸಣ್ಣವಾದುದನ್ನು ಅರೆಯುವನು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**60.** **ಹೇಳಿಕೆ**: ''ಗಣವೆಂದರೆ ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಪದಗಳ ಗುಂಪು''.

**ವಿವರಣೆ** : ಗಣವೆಂದರೆ ಅನಿಯಮಿತ ರೂಪದಲ್ಲಿ ವಿಂಗಡಿಸಲ್ಪಟ್ಟ ಪದಗಳ ಗುಂಪು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**61.** **ಹೇಳಿಕೆ**: ''ಒಸಗೆನುಡಿ ತಂದಿಹೆನು ನಾನೊಂದ ತಾಯಿಂದ''.

**ವಿವರಣೆ** : ತಾಯಿಯಿಂದ ನಾನೊಂದು ರಹಸ್ಯ ನುಡಿ ತಂದಿರುವೆನು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**62.** **ಹೇಳಿಕೆ**: ''ನಿಜದೊಳೆ ಭೂಪರೆಂಬರ್ ವಿವೇಕಿಗಳಪ್ಪರ್''.

**ವಿವರಣೆ**: ನಿಜಕ್ಕೆ ರಾಜರೆಂಬುವರು ವಿವೇಕಿಗಳಾಗಿರುತ್ತಾರೆ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**63.** **ಹೇಳಿಕೆ**: ''ಭಕ್ತನಾದರೆ ಎಂತಿರಬೇಕೆಂದರೆ ಉಲುಹಡಗಿದ ವೃಕ್ಷದಂತಿರಬೇಕು''.

**ವಿವರಣೆ** : ಭಕ್ತನಾದವನು ಹೇಗಿರಬೇಕೆಂದರೆ ಬೀಜವಡಗಿದ ವೃಕ್ಷದಂತಿರಬೇಕು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**64.** **ಹೇಳಿಕೆ**: ''ಭಗವತಿಯೇರುವೇಳ್ವ ತೆರದಿಂ ಕಥೆಯಾಯ್ತಿವರೇರು''.

**ವಿವರಣೆ** : ಭಗವತಿಯು ಹೇಳಿದ ಕಥೆಯಂತಾಯಿತು ಇವರ ಕಥೆ.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**65.** **ಹೇಳಿಕೆ** : ''ನುಣ್ದನಿ ನಿದ್ರೆಗೆ ಕತ ಬೀಜಮಾಯ್ತೆನೆ ಮೃಗಲೋಚನೆ ತಿಳಿದಾಲಿಸಿ ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್''.

**ವಿವರಣೆ** : ಸೊಂಪಾದ ನಿದ್ರೆಯಲ್ಲಿದ್ದಾಗ ಮೃಗದ ರಾಗವನ್ನು ಕೇಳಿ ಮನವು ಎಚ್ಚರಗೊಂಡಿತು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ಸರಿ, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**ಬಹು ಆಯ್ಕೆಯ ಜೋಡಣೆಯ ಮಾದರಿ :**

**66.** a) ಅರಗು ತಿಂದು ಕರಗುವ ದೈವವ  1) ಅಲ್ಲಮ ಪ್ರಭು
b) ನೆಲದ ಮರೆಯ ನಿದಾನದಂತೆ  2) ಅಕ್ಕಮಹಾದೇವಿ
c) ಮರದೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ  3) ಬಸವಣ್ಣ
d) ಎನ್ನ ನಾನರಿಯದುಂದು ಮುನ್ನ ನೀನೆಲ್ಲಿರ್ದೆ  4) ಜೇಡರ ದಾಸಿಮಯ್ಯ
5) ಸಿದ್ಧರಾಮ

| | a | b | c | d |
|---|---|---|---|---|
| (A) | 3 | 1 | 4 | 2 |
| (B) | 3 | 4 | 1 | 2 |
| (C) | 3 | 4 | 1 | 5 |
| (D) | 4 | 3 | 2 | 1 |

**67.** a) ಏನೂ ಇಲ್ಲದ ಎರಡು ದಿನದ ಸಂಸಾರ  1) ಪುರಂದರದಾಸ
b) ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ  2) ವ್ಯಾಸರಾಯ
c) ಗಾತ್ರವೇ ಮಂದಿರ ಹೃದಯವೇ ಮಂಟಪ  3) ಕನಕದಾಸ
d) ಅರಿತವರಿಗತಿ ಸುಲಭ ಹರಿಯ ಪೂಜೆ  4) ಪ್ರಸನ್ನವೆಂಕಟದಾಸ
5) ಜಗನ್ನಾಥದಾಸ

| | a | b | c | d |
|---|---|---|---|---|
| (A) | 3 | 2 | 1 | 4 |
| (B) | 3 | 1 | 2 | 5 |
| (C) | 4 | 1 | 2 | 5 |
| (D) | 3 | 2 | 1 | 5 |

**68.** a) ಇಂದೆನಗಾತನೆ ಕುಲದೈವಂ, ಕಾಮದೇವಂ, ಇಂದ್ರಂ, ಚಂದ್ರಂ  1) ವಿಕ್ರಮಾರ್ಜುನ ವಿಜಯ
b) ಎನಿತಾದೊಡಮೇನ್ ಪ್ರಭುಪೊಲ್ಲಕೆಯ್ಯುಗ್ಗಮೇ  2) ಕವಿರಾಜಮಾರ್ಗ
c) ಪಾಪಮಿದು ಪುಣ್ಯಮಿದು ಹಿತರೂಪಮಿದಹಿತ ಪ್ರಕಾರಮಿದು  3) ಯಶೋಧರ ಚರಿತೆ
d) ಮುಳ್ಳಿಡಿದ ಮರನೇರಿದಂತಾದುದು  4) ಸಾಹಸಭೀಮ ವಿಜಯಂ
5) ಜೈಮಿನಿ ಭಾರತ

| | a | b | c | d |
|---|---|---|---|---|
| (A) | 3 | 1 | 4 | 2 |
| (B) | 3 | 1 | 2 | 5 |
| (C) | 1 | 2 | 3 | 4 |
| (D) | 3 | 2 | 1 | 5 |

**69.** a) ನಿರಪೇಕ್ಷ  1) ಸಿ.ಎನ್. ರಾಮಚಂದ್ರನ್
b) ಆಶಯ–ಆಕೃತಿ  2) ಜಿ.ಹೆಚ್. ನಾಯಕ
c) ವಿಮರ್ಶೆಯ ವಿನಯ:ಕಾದಂಬರಿ  3) ಗಿರಡ್ಡಿಗೋವಿಂದರಾಜು
d) ಕಾದಂಬರಿ:ವಸ್ತು ಮತ್ತು ತಂತ್ರ  4) ಕೀರ್ತಿನಾಥಕುರ್ತುಕೋಟಿ
5) ಟಿ.ಪಿ. ಅಶೋಕ

| | a | b | c | d |
|---|---|---|---|---|
| (A) | 2 | 5 | 3 | 4 |
| (B) | 2 | 1 | 4 | 5 |
| (C) | 2 | 1 | 4 | 3 |
| (D) | 2 | 3 | 4 | 1 |

**ಅನುಕ್ರಮ ಮಾದರಿ**

**ಈ ಕೆಳಗಿನವುಗಳಲ್ಲಿ ಕಾಲಾನುಕ್ರಮಣಿಕೆಯನ್ನು ಗುರುತಿಸಿ.**

**70.** (A) ಗಿರಿಜಾ ಕಲ್ಯಾಣ, ಕುಸುಮಾವಳಿ, ಶಬ್ದಮಣಿದರ್ಪಣ, ನಳಚರಿತೆ
(B) ಕುಸುಮಾವಳಿ, ಶಬ್ದಮಣಿದರ್ಪಣ, ನಳಚರಿತೆ, ಗಿರಿಜಾ ಕಲ್ಯಾಣ
(C) ಗಿರಿಜಾ ಕಲ್ಯಾಣ, ಶಬ್ದಮಣಿದರ್ಪಣ, ಕುಸುಮಾವಳಿ, ನಳಚರಿತೆ
(D) ಗಿರಿಜಾ ಕಲ್ಯಾಣ, ಶಬ್ದಮಣಿದರ್ಪಣ, ನಳಚರಿತೆ, ಕುಸುಮಾವಳಿ

**71.** (A) ಎಂ. ಗೋಪಾಲಕೃಷ್ಣ ಅಡಿಗ, ಚೆನ್ನವೀರ ಕಣವಿ, ಜಿ.ಎಸ್. ಎಸ್., ಎ.ಕೆ. ರಾಮಾನುಜನ್
(B) ಎಂ. ಗೋಪಾಲಕೃಷ್ಣ ಅಡಿಗ, ಜಿ.ಎಸ್. ಎಸ್., ಚೆನ್ನವೀರ ಕಣವಿ, ಎ.ಕೆ. ರಾಮಾನುಜನ್
(C) ಎಂ. ಗೋಪಾಲಕೃಷ್ಣ ಅಡಿಗ, ಎ.ಕೆ. ರಾಮಾನುಜನ್, ಚೆನ್ನವೀರ ಕಣವಿ, ಜಿ.ಎಸ್. ಎಸ್.
(D) ಚೆನ್ನವೀರ ಕಣವಿ, ಜಿ.ಎಸ್. ಎಸ್., ಎಂ. ಗೋಪಾಲಕೃಷ್ಣ ಅಡಿಗ, ಎ.ಕೆ. ರಾಮಾನುಜನ್

**72.** (A) ಪೊನ್ನ, ಚಾವುಂಡರಾಯ, ನಯಸೇನ, ಬ್ರಹ್ಮಶಿವ
(B) ಪೊನ್ನ, ನಯಸೇನ, ಚಾವುಂಡರಾಯ, ಬ್ರಹ್ಮಶಿವ
(C) ಚಾವುಂಡರಾಯ, ಬ್ರಹ್ಮಶಿವ, ನಯಸೇನ, ಪೊನ್ನ
(D) ಪೊನ್ನ, ಬ್ರಹ್ಮಶಿವ, ಚಾವುಂಡರಾಯ, ನಯಸೇನ

**73.** (A) ಭರತ, ವಾಮನ, ದಂಡಿ, ವಿಶ್ವನಾಥ
(B) ಭರತ, ದಂಡಿ, ವಾಮನ, ವಿಶ್ವನಾಥ
(C) ದಂಡಿ, ಭರತ, ವಿಶ್ವನಾಥ, ವಾಮನ,
(D) ದಂಡಿ, ಭರತ, ವಾಮನ, ವಿಶ್ವನಾಥ

**74.** (A) ದಾಟು, ಗೃಹಭಂಗ, ಸಾಕ್ಷಿ, ಪರ್ವ
(B) ಗೃಹಭಂಗ, ಪರ್ವ, ಸಾಕ್ಷಿ, ದಾಟು
(C) ಗೃಹಭಂಗ, ದಾಟು, ಪರ್ವ, ಸಾಕ್ಷಿ
(D) ಪರ್ವ, ದಾಟು, ಗೃಹಭಂಗ, ಸಾಕ್ಷಿ

**75.** (A) ಶಿಕಾರಿ, ಭೇದ, ಮೂರು ದಾರಿಗಳು, ಪುರುಷೋತ್ತಮ
(B) ಮೂರು ದಾರಿಗಳು, ಭೇದ, ಶಿಕಾರಿ, ಪುರುಷೋತ್ತಮ
(C) ಭೇದ, ಶಿಕಾರಿ, ಮೂರು ದಾರಿಗಳು, ಪುರುಷೋತ್ತಮ
(D) ಮೂರು ದಾರಿಗಳು, ಶಿಕಾರಿ, ಭೇದ, ಪುರುಷೋತ್ತಮ

ಚಿತ್ತು ಬರಹಕ್ಕಾಗಿ ಸ್ಥಳ
Space for Rough Work